ಅಥವಾ ೭ ನೂರು ಆಗಲಿ ಕೊಡುತ್ತೇವೆಂದು ನಿರ್ದಿಷ್ಟವಾಗಿ ಭರವಸೆ ಕೊಡಬೇಕು. ಈ ಕಾರ್ಯಕ್ರಮದ ಉದ್ದೇಶ ಮಂತ್ರಿಗಳಿಗೆ ಇದ್ದರೆ ಅಂದರೆ ಅವರುಗಳಿಗೆ ಲಗ್ನ ಮಾಡಬೇಕೆಂದು ಭಾವನೆ ಇದ್ದರೆ, ಆಸಕ್ತಿ ಇದ್ದರೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ವಿರೋಧ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದ ಸದಸ್ಯರು ಎಲ್ಲರಿಗೂ ಸಹ ಈ ಯೋಜನೆ ಬಗ್ಗೆ ಕಳಕಳಿ ಇದೆ ಮತ್ತು ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೂ ಆಸಕ್ತಿಯಿದೆ. ಆದ್ದರಿಂದ ಸೂಕ್ತವಾದ ಕ್ರಮ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈ ತಾಳಿ ಭಾಗ್ಯ ಯೋಜನೆ ಅಡಿಯಲ್ಲಿ ಮಾನ್ಯ ಮಂತ್ರಿಗಳು ಅಥವಾ ಶಾಸಕರು ಇದರ ಪ್ರಯೋಜನ ತೆಗೆದುಕೊಂಡಿದ್ದಾರೋ, ತಮ್ಮ ಮಕ್ಕಳ, ಜನರ ಸಲುವಾಗಿ ತೆಗೆದುಕೊಂಡಿದ್ದಾರೋ ? ಸಾಮಾನ್ಯ ಜನರಿಗೆ ಹಾಕಿಕೊಂಡು ಕಾರ್ಯಕ್ರಮದಲ್ಲಿ ದುರುಪಯೋಗ ಆಗಬಾರದು. ಮುಂದುವೆಗಳು ಪ್ರಮಾಣದಲ್ಲಿ ಈ ಯೋಜನೆಯಿಂದ ಹೆಚ್ಚು ಆಗಿದೆಯೇ ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಜಿ. ಬಸವಣ್ಣೆಪ್ಪ.—೪೦ ಲಕ್ಷ ರೂಪಾಯಿಯಲ್ಲಿ ೨೮ ಲಕ್ಷ ರೂಪಾಯಿಗಳು ಖರ್ಚಾಗಿದೆ. ಮುಂದುವೆ ಪ್ರಮಾಣದಲ್ಲಿ ಹೆಚ್ಚು ಆಗಿದೆ, ಇದರಲ್ಲಿ ಶಾಸಕರೇ ಆಗಲೀ ಯಾರೇ ಆಗಲಿ ದುರುಪಯೋಗ ಮಾಡಿಕೊಂಡಿಲ್ಲ. ಅವರವರ ಕ್ಷೇತ್ರದಲ್ಲಿ ನಿಜವಾದ ಅರ್ಹ ಕುಟುಂಬಗಳು ಏನು ಇವೆ ಅವರನ್ನು ಗುರುತು ಹಚ್ಚಿ ಮುಂದೆ ಕರೆದುಕೊಂಡು ಬಂದು ಮುಂದುವೆ ಮಾಡಿಸುತ್ತಿದ್ದಾರೆ. ಮಂಗಳೂರಿನಲ್ಲಿ ನಮ್ಮ ಮಂತ್ರಿಗಳು ಇಂತಹ ಅರ್ಹ ಕುಟುಂಬಗಳನ್ನು ಗುರುತು ಹಚ್ಚಿ ತಾಳಿ ಭಾಗ್ಯ ಕಾರ್ಯಕ್ರಮ ಹೆಚ್ಚು ಮಾಡಿದ್ದಾರೆ.

ಶ್ರೀ ಪಿ. ಎಂ. ಉದಾಸಿ.—ತಾಳಿ ಭಾಗ್ಯ ಯೋಜನೆಯಲ್ಲಿ ೩೫೦ ರೂಪಾಯಿಗಳನ್ನು ಕೊಡ ಬೇಕೆಂದು ಯೋಜನೆ ಇದೆ. ಅದರಲ್ಲಿ ಬಟ್ಟೆಯೂ ಸೇರುತ್ತದೆ. ಬಂಗಾರವೂ ಸೇರುತ್ತದೆ ಬಟ್ಟೆ ಯನ್ನು ಕೊಡದ್ದಿದರೂ ಪರವಾಗಿಲ್ಲ. ತಾಳಿ ಬೆಲೆ ೫೦೦, ೬೦೦ ರೂಪಾಯಿ ಅಥವಾ ೭೦೦ ಆದರೂ ಬಂಗಾರದ ತಾಳಿಯನ್ನು ಕೊಡುವ ಬಗ್ಗೆ ತೀರ್ಮಾನ ಮಾಡುತ್ತಾರೆಯೇ ಎಂದು ಸಚಿವರು ತಿಳಿಸ ಬೇಕು.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಸದಸ್ಯರ ಸಲಹೆ ಒಳ್ಳೆಯದು. ಅದನ್ನು ಪರಿಶೀಲಿಸುತ್ತೇನೆ.

ವಿದ್ಯಾರ್ಥಿ ನಿಲಯಗಳ ಮಂಜೂರಾತಿ

೩೭೫. ಶ್ರೀ ಆರ್. ವೆಂಕಟರಾವಂಯ್ಯ (ಮುಳಬಾಗಿಲು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಕಾಲೇಜು ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ಮಟ್ಟದಲ್ಲಿರುವ ಒಟ್ಟು ವಿದ್ಯಾರ್ಥಿನಿಲಯಗಳೆಷ್ಟು ?

(ಆ) ಆಶ್ರಮಶಾಲೆ ಮತ್ತು ವಸತಿಶಾಲೆಗಳೆಷ್ಟು ? ಹಾಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಅವುಗಳಲ್ಲಿ ಹರಿಜನ-ಗಿರಿಜನ ವಿದ್ಯಾರ್ಥಿನಿಲಯಗಳೆಷ್ಟು ? ಹಾಗೂ, ಇವುಗಳಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನೀಯರೆಷ್ಟು ? ಜಿಲ್ಲಾವಾರು ವಿವರ ನೀಡುವುದು.

(ಇ) ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಸರ್ಕಾರವು ಅನುಸರಿಸುವ ನೀತಿ ಯೇನು ?

(ಈ) ಸರ್ಕಾರವು ಹೋಬಳಿ ಕೇಂದ್ರ ಹಾಗೂ ಪ್ರೌಢಶಾಲೆಗಳಿರುವ ಕಡೆ ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಸಮಾಜ ಕಲ್ಯಾಣ ಇಲಾಖೆ ... ೧೦೨೭
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ... ೯೪೬

(ಆ)		ಶಾಲೆಗಳ ಸಂಖ್ಯೆ		ವಿದ್ಯಾರ್ಥಿಗಳ ಸಂಖ್ಯೆ	
ಸ.ಕ. ಇಲಾಖೆ	ಆಶ್ರಮ	...	೬೨ ೩೯೦	... ಹರಿಜನರಿಗಾಗಿ	... ೬೨
	ವಸತಿ	...	೮೮ ೪೭೫೦	... ಗಿರಿಜನರಿಗಾಗಿ	... ೮೮
ಬಿ.ಸಿ.ಎಂ. ಇಲಾಖೆ	ಆಶ್ರಮ	...	೫೩ ೨೬೫೫	...	

ಆಶ್ರಮಶಾಲೆ ಮಂತ್ತು ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಜಿಲ್ಲಾವಾರು ಸಂಖ್ಯೆ ಮಂತ್ತು ಪ್ರಯೋಜನ ಪಡೆಯುತ್ತಿರುವ ಸಂಖ್ಯೆಯನ್ನು ತೋರಿಸುವ ಪಟ್ಟಿಯನ್ನು ಅನುಬಂಧ—೧ರಲ್ಲಿ ಲಗತ್ತಿಸಿದೆ. ಮಂತ್ತು ಸದರಿ ಆಶ್ರಮಶಾಲೆ ಮತ್ತು ವಸತಿ ಶಾಲೆಗಳಲ್ಲಿ ಬಾಲಕ/ಬಾಲಕೀಯರು ಒಟ್ಟಿಗೆ ಇರುತ್ತಾರೆ. ಅವರ ಸಂಖ್ಯೆಯನ್ನು ನಿಗದಿ ಮಾಡಿರುವುದಿಲ್ಲ. ಆದರೂ, ಸಾಧಾರಣವಾಗಿ ೧/೩ ಭಾಗ ಬಾಲಕೀಯರು ಮತ್ತು ೨/೩ ಭಾಗ ಬಾಲಕರು ಇರುತ್ತಾರೆ.

(ಇ) ಈಗಾಗಲೇ ಈ ಯೋಜನೆಯು ಜಿಲ್ಲಾಪರಿಷತ್‌ಗೆ ವಹಿಸಲಾಗಿದೆ. ಒಂದು ಸ್ಥಳದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆ ಅಥವಾ ಕಾಲೇಜು ನಡೆಯುತ್ತಿದ್ದು ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ೮ ಕಿ.ಮೀ.ಗೂ ಹೆಚ್ಚು ದೂರದಿಂದ ವ್ಯಾಸಂಗಕ್ಕೆ ಬರುತ್ತಿದ್ದಲ್ಲಿ, ಹಾಗೂ ವಿದ್ಯಾರ್ಥಿನಿಲಯದ ಅವಶ್ಯಕತೆ ಕಂಡುಬಂದಲ್ಲಿ ಸಂಬಂಧಪಟ್ಟ ಜಿಲ್ಲಾಪರಿಷತ್ತಿನವರ ಶಿಫಾರಸ್ಸಿನ ಮೇಲೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು.

(ಈ) ಸಾಕಷ್ಟು ಹೋಬಳಿ ಕೇಂದ್ರ ಮತ್ತು ಪ್ರೌಢಶಾಲೆಗಳಿರುವ ಕಡೆಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಇದ್ದಾ ಅಂತಹ ಸ್ಥಳಗಳಿಂದ ಬೇಡಿಕೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ—೧

ಆಶ್ರಮ : ವಸತಿ ಶಾಲೆಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಆಶ್ರಮ ಶಾಲೆ	ವಿದ್ಯಾರ್ಥಿಗಳ ಸಂಖ್ಯೆ	ವಸತಿ ಶಾಲೆ	ವಿದ್ಯಾರ್ಥಿಗಳ ಸಂಖ್ಯೆ
೧	ಬೆಂಗಳೂರು (ನಗರ)	೩	೧೫೦	೨	೧೫೦
೨	ಬೆಂಗಳೂರು (ಗ್ರಾಮಾಂತರ)	೮	೩೫೦	೨	೫೦
೩	ಚಿತ್ರದುರ್ಗ	೩	೧೭೫	೩	೧೨೫
೪	ಕೋಲಾರ	೪	೧೬೦	೩	೧೫೦
೫	ತುಮಕೂರು	೪	೧೫೦	೨	೧೨೫
೬	ಶಿವಮೊಗ್ಗ	೪	೨೫೦	೩	೧೦೦
೭	ಮೈಸೂರು	೨೩	೧೩೦೦	೩	೧೭೫
೮	ಮಂಡ್ಯ	೧	೫೦	೧	೨೫
೯	ಹಾಸನ	೨	೧೦೦	೪	೧೭೫
೧೦	ಚಿಕ್ಕಮಗಳೂರು	೮	೪೦೦	೨	೭೫
೧೧	ಕೊಡಗು	೧೨	೬೨೫	೧	೫೦
೧೨	ದಕ್ಷಿಣ ಕನ್ನಡ ಜಿಲ್ಲೆ	೧೫	೧೦೨೫	೧	೧೦೦
೧೩	ಬೆಳಗಾಂವ್	೭	೩೨೫	೪	೧೭೫
೧೪	ಬಿಜಾಪುರ	೮	೩೭೫	೧೦	೬೨೫
೧೫	ಧಾರವಾಡ	೬	೪೨೫	೧೦	೬೦೦
೧೬	ಉ. ಕನ್ನಡಜಿಲ್ಲೆ	೧	೭೫	೩	೧೨೫
೧೭	ಬೀದರ್	೧	೫೦	೮	೩೨೫
೧೮	ಗುಲ್ಬರ್ಗ	೧	೧೦೦	೧೫	೧೦೨೫
೧೯	ರಾಯಚೂರು	೧	೨೫	೨	೪೫೦
೨೦	ಬಳ್ಳಾರಿ	೩	೧೨೫	೩	೧೨೫
	ಒಟ್ಟು	೧೧೫	೬೫೩೫	೮೮	೬೭೫೦

ಶ್ರೀ ಆರ್. ವೆಂಕಟರಾವಯ್ಯ.....ಮಾನ್ಯ ಅಧ್ಯಕ್ಷರೇ, ಪ್ರೌಢಶಾಲೆಗಳು ಇರುವ ಕಡೆ ಮತ್ತು ಹೋಬಳಿ ಕೇಂದ್ರಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ತೆರೆಯುವುದಕ್ಕೆ ಸೂಕ್ತ ಕ್ರಮ ತೆಗದುಕೊಳ್ಳುತ್ತೀರಾ ಎಂದು ನಾನು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಈ ರೀತಿ ಹಾಸ್ಟೆಲ್‌ಗಳನ್ನು ತೆರೆಯಲು ಜಿಲ್ಲಾ ಪರಿಷತ್‌ನ ರೆಕಮೆಂಡೇಷನ್ ಬೇಕು ಎಂದು ಹೇಳಿದಾರೆ. ಈಗ ಕಾಲೇಜುಗಳು ಇರುವ ಕಡೆಯೂ ಸಹ ಈ ಹಾಸ್ಟೆಲ್‌ಗಳನ್ನು ತೆರೆಯುತ್ತಿಲ್ಲ. ಎಷ್ಟೋ ವಿದ್ಯಾರ್ಥಿಗಳು ಸೈನ್ಸ್‌ಕೂಲನ್ನು ಮುಗಿಸುವ ಹೊತ್ತಿಗೆ ಬಿಟ್ಟುಬಿಡುತ್ತಾರೆ. ಆದ್ದರಿಂದ ಬಡ ವಿದ್ಯಾರ್ಥಿಗಳು ಜಾಸ್ತಿ ಇರುವ ಕಡೆಯಲ್ಲಿ ಹಾಸ್ಟೆಲ್‌ಗಳನ್ನು ತೆರೆದರೆ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಂದುವರೆಸಲು ಅನುಕೂಲವಾಗುತ್ತದೆ. ತಮಿಳುನಾಡಿನಲ್ಲಿ ಎಂ.ಜಿ. ರಾಮಚಂದ್ರನ್ ಅವರು ಮಿಡ್ಡೇ ಮೀಲ್ಸ್ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಅಲ್ಲಿ ಒಳ್ಳೆಯ ಪ್ರೋಗ್ರೆಸ್ ಕಂಡು, ಶಾಲೆಗಳನ್ನು ಬಿಟ್ಟು ಹೋಗುವವರ ಸಂಖ್ಯೆ ಕಡಿಮೆ ಆಯಿತು. ಆದ್ದರಿಂದ ಇಲ್ಲಿಯೂ ಹೈಸ್ಕೂಲುಗಳು ಇರುವ ಕಡೆ ಅಂದರೆ ಹೋಬಳಿ ಮಟ್ಟದಲ್ಲಿ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಈಗಾಗಲೇ ಈ ಹಾಸ್ಟೆಲ್‌ಗಳನ್ನು ತೆರೆಯಲು ಬೇಕಾದಂಥ ನಾರಮ್ಸ್‌ನ್ನು ನಾನು ಹೇಳಿದ್ದೇನೆ. ಈ ಹಾಸ್ಟೆಲ್‌ಗಳನ್ನು ತೆರೆಯುವ ಕಾಲೇಜುಗಳು ಮತ್ತು ಪ್ರೌಢ ಶಾಲೆಗಳು ಇರುವ ಕಡೆಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಜಾತಿಗಳ ವಿದ್ಯಾರ್ಥಿಗಳು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕಾಗುತ್ತದೆ ಮತ್ತು, ಈ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ೮ ಕಿ.ಮೀ. ಗಳ ಹೆಚ್ಚು ದೂರದಿಂದ ವ್ಯಾಸಂಗಕ್ಕೆ ಬರುತ್ತಿದ್ದರೆ ಮಾತ್ರ ಈ ಹಾಸ್ಟೆಲ್‌ಗಳನ್ನು ತೆರೆಯಬೇಕೆಂಬ ನಾರಮ್ಸ್ ಇದೆ. ಆದರಂತೆ ನಾವು ಮಾಡುತ್ತಿದ್ದೇವೆ. ನಾವು ಅಧಿಕಾರಕ್ಕೆ ಬಂದಮೇಲೆ ಹೊಸದಾಗಿ ಪ್ರೌಢಶಾಲೆಗಳು ಮತ್ತು ಕಾಲೇಜುಗಳು ಏನು ಪ್ರಾರಂಭವಾಗಿವೆ. ಅದಕ್ಕೆ ಅನುಗುಣವಾಗಿ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಲು ಸಾಧ್ಯವಾಗಲಿಲ್ಲ. ಹಾಸ್ಟೆಲ್‌ಗಳನ್ನು ತೆರೆಯಬೇಕೆಂಬ ಬೇಡಿಕೆ ಜಾಸ್ತಿ ಆಗಿದೆ. ಇದರ ಬಗ್ಗೆ ನನಗೆ ಮಾನ್ಯ ಸದಸ್ಯರು ಪತ್ರ ಬರೆಯುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಅನೇಕ ಸಲ ಚರ್ಚೆ ನಡೆದಿದೆ. ಹೋದ ಸಲ ಎಸ್.ಸಿ. ಮತ್ತು ಎಸ್.ಟಿ. ಅವರಿಗಾಗಿ ೫೦ ಹಾಸ್ಟೆಲ್‌ಗಳನ್ನು ಮತ್ತು ಹಿಂದುಳಿದ ವರ್ಗದವರಿಗಾಗಿ ೨೫ ಹಾಸ್ಟೆಲ್‌ಗಳನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಾಸ್ಟೆಲ್‌ಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಪ್ರತಿ ಪ್ರೌಢಶಾಲೆಗೆ ಒಂದರಂತೆ ಹಾಸ್ಟೆಲ್ ಬೇಕೆಂದು ಹೇಳುತ್ತಾರೆ. ಆ ಒಂದು ಮಾಟ್ಟದಲ್ಲಿ ನಾವು ಹೋಗಬೇಕಾದರೆ ನಮಗೆ ಕಷ್ಟವಾಗುತ್ತದೆ, ನಾವು ಹಂತಹಂತವಾಗಿ ಇವುಗಳನ್ನು ತೆರೆಯಲು ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್, ವೆಂಕಟರಾವಯ್ಯ.—ನಮ್ಮಲ್ಲಿ ಈಗ ೧೪ ಹೈಸ್ಕೂಲುಗಳು ೩ ಕಾಲೇಜುಗಳು ಇದ್ದರೂ ಸಹ ೫೫ ಹಾಸ್ಟೆಲುಂ ಮಾತ್ರ ಇವೆ ಇದರಿಂದ ೫೦ ಪರ್ಸೆಂಟ್ ವಿದ್ಯಾರ್ಥಿಗಳು ಪೈಕಿ ಒಬ್ಬರಿಗೆ ಹಾಸ್ಟೆಲಿನ ಸೌಕರ್ಯ ಸಿಗುವುದು ಸಹ ಕಷ್ಟವಾಗಿದೆ. ಹಾಕಿಕೊಂಡಿರುವ ನಾರಮ್ಸ್ ಪ್ರಕಾರವಾದರೂ ಹಾಸ್ಟೆಲ್ ಗಳನ್ನು ತೆರೆಯದಿದ್ದರೆ ವಿದ್ಯಾರ್ಥಿಗಳಿಗೆ ಅನುಕೂಲ ಅನುಕೂಲ ಒದಗಿಸುವುದು ಕಷ್ಟವಾಗುತ್ತದೆ. ಇಲ್ಲಿ ೮ ಕಿ.ಮೀ. ಹೆಚ್ಚು ದೂರದಿಂದ ವ್ಯಾಸಂಗಕ್ಕೆ ಬರುತ್ತಿದ್ದಲ್ಲಿ ಮಾತ್ರ ಹಾಸ್ಟೆಲ್‌ಗಳನ್ನು ತೆರೆಯಲಾಗುವುದೆಂದು ಹೇಳಿದ್ದಾರೆ. ಇದನ್ನಾದರೂ ಅನುಸರಿಸಿ ಹಾಸ್ಟೆಲ್‌ಗಳನ್ನು ತೆರೆದಿದ್ದೀರಾ? ಕಳೆದ ಸಲ ಪ್ರಾರಂಭ ಮಾಡಿದ್ದು ೭೫ ಹಾಸ್ಟೆಲ್‌ಗಳನ್ನು ಮಾತ್ರ, ಮತ್ತೆ ಎಷ್ಟು ಹಾಸ್ಟೆಲ್‌ಗಳು ಬೇಕು ಎಂದು ಶಾಸಕರಿಂದ ಮನವಿಗಳು ಬಂದಿವೆ ಎಂಬುದನ್ನು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ —ಈ ಹಾಸ್ಟೆಲ್‌ಗಳನ್ನು ತೆರೆಯಲು ಕೆಲವು ನಾರಮ್ಸ್‌ಗಳನ್ನು ನಾವು ಹಾಕಿಕೊಂಡಿದ್ದೇವೆ. We were not able to fulfil the criteria. I aceptit. ೮ ಕಿ.ಮೀ.ಗೂ ಹೆಚ್ಚು ದೂರದಿಂದ ವ್ಯಾಸಂಗಕ್ಕೆ ವಿದ್ಯಾರ್ಥಿಗಳು ಬರುತ್ತಿರುವ ಕಡೆ ಆದರೂ ಈ ಹಾಸ್ಟೆಲ್‌ಗಳನ್ನು ತೆರೆದಿದ್ದೀರಾ ಎಂದು ಕೇಳಿದ್ದಾರೆ. ಇಂತಹ ಕಡೆಗಳಲ್ಲಿ ನಾವು ಹಂತಹಂತವಾಗಿ ಪ್ರಾರಂಭ ಮಾಡುತ್ತೇವೆ. ನಮ್ಮ ಗುರಿಯನ್ನು ಹಂತಹಂತವಾಗಿ ಮುಟ್ಟಬೇಕೆಂದಿದ್ದೇವೆ. ಹೋಬಳಿ ಕೇಂದ್ರಗಳಲ್ಲಿ ಹಾಸ್ಟೆಲ್‌ಗಳನ್ನು ತೆರೆಯಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಇದನ್ನು ನಾವು ಹಂತ ಹಂತವಾಗಿ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಹಂತಹಂತವಾಗಿ ಮಾಡುತ್ತೇವೆ ಎಂದು ಹೇಳಿದರು. ಹೋಗಲಿ ನೀವು ಈ ವರ್ಷವಾದರೂ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ನಿವೃತ್ತ ನಾರ್ಮಸ್‌ಗಾದರೂ ಒಪ್ಪುತ್ತೀರಾ? ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಎಲ್ಲಾ ಕಡೆ ಹೈಸ್ಕೂಲ್ ಇದೆ ಎಂದು ತಪ್ಪಾಗಿ ಗೊತ್ತಿದೆ. ಹೋಬಳಿ ಹೆಡ್ ಕ್ವಾರ್ಟರ್ಸ್ ಅಂದರೆ ೪-೫ ಸಾವಿರ ಜನ ಇರುತ್ತಾರೆ ಎಂದು ತಪ್ಪಾಗಿ ಗೊತ್ತು. ಇನ್ನೇನೂ ಇಲ್ಲದೇ ಇದ್ದರೂ ಕೂಡ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಾದರೂ ಹಾಸ್ಪೆಲ್ ಕೊಡುವುದಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಮೊದಲು ಪ್ರಾರಂಭ ಮಾಡತಕ್ಕಂಥದ್ದು ಕಾಲೇಜು, ಹೈಸ್ಕೂಲ್ಸ್ ಎಲ್ಲದೆ, ಅವಶ್ಯಕತೆ ಎಲ್ಲಿದೆ ಎಲ್ಲಿ ಹಿಂದುಳಿದ ಪಂಗಡ, ಪರಿಶಿಷ್ಟ ಜಾತಿಯವರು, ಇದ್ದಾರೆ ಅಲ್ಲಿ ಮೊದಲು ಆದ್ಯತೆ ಕೊಡುತ್ತೇವೆ. ಎರಡನೆಯ ಆದ್ಯತೆ ಹೋಬಳಿಗೆ.

ಅಧ್ಯಕ್ಷರು.—ಈಗ ಕಂದಾಯ ಮಾನ್ಯ ಮಂತ್ರಿಗಳು ಬಂದಿದ್ದಾರೆ. ಅವರ ಪ್ರಶ್ನೆ ತೆಗೆದು ಕೊಳ್ಳೋಣ.

ಬನಹಟ್ಟಿಯಲ್ಲಿ ಉಪ-ನೋಂದಣಿ ಕಛೇರಿ

೬೫. ಶ್ರೀ ಬಾಬುರೆಡ್ಡಿ ತಂಗಳ್ (ಬೀಳಗಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಉಪ-ನೋಂದಣಿ ಅಧಿಕಾರಿಗಳ ಕಛೇರಿಯನ್ನು ಆರಂಭಿಸುವ ಸಲಹೆ ಏನಾದರೂ ಸರ್ಕಾರದಲ್ಲಿದೆಯೇ :

ಆ) ಹಾಗಿದ್ದಲ್ಲಿ ಈ ಕಛೇರಿಯನ್ನು ಶೀಘ್ರವೇ ಆರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ನನಗಿಂತ ಚೆನ್ನಾಗಿ ತಿಳಿದಿರುವಂತೆ ರಬಕವಿ, ಬನಹಟ್ಟಿ ನಗರಸಭೆ ಇರುವಂಥ ಅವಳಿ ನಗರಗಳು. ಅಲ್ಲಿಂದ ೧೦ ಮೈಲಿ ದೂರದಲ್ಲಿರುವ ತೇರದಾಳು ಮುನಿಸಿಪಾಲಿಟಿ ಇರುವಂಥ ನಗರ. ಸುತ್ತಮುತ್ತಲಿನ ೨೫ ಹಳ್ಳಿಗಳಿಗೆ ಬನಹಟ್ಟಿ ಕೇಂದ್ರಸ್ಥಾನವಾಗಿದೆ. ಬನಹಟ್ಟಿಯಲ್ಲಿ ಈಗಾಗಲೇ ಉಪ-ಖಜಾನೆ, ನ್ಯಾಯಾಲಯಗಳು, ನಾಲ್ಕಾರು ಬ್ಯಾಂಕುಗಳು, ನಾಲ್ಕಾರು ಕಾಲೇಜುಗಳು, ಕೆ ಎಸ್.ಟಿ.ಡಿ.ಸಿ., ಕೆ.ಇ.ಬಿ. ಉಪ-ವಿಭಾಗಗಳು ಎಲ್ಲಾ ಇವೆ ಆದಕಾರಣ ಜಮಖಂಡಿಯಲ್ಲಿಯ ಉಪ-ನೋಂದಣಿ ಕಛೇರಿಯ ಒತ್ತಡವನ್ನು ತಗ್ಗಿಸಲಿಕ್ಕೆ ಬನಹಟ್ಟಿಯಲ್ಲಿ ಒಂದು ಉಪ-ನೋಂದಣಿ ಕಛೇರಿಯ ಅವಶ್ಯಕತೆ ಇದೆ. ಅದನ್ನು ಶೀಘ್ರವಾಗಿ ಮಾಡಿಸಿಕೊಡಬೇಕು. ಆ ನಿಟ್ಟಿನಲ್ಲಿ ಮಾನ್ಯ ಕಂದಾಯ ಮಂತ್ರಿಗಳು ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮುಖೇನ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಅವಶ್ಯಕತೆ ಇದೆ ಎಂದು ಒಪ್ಪಿದ್ದೇನೆ. ಆದಷ್ಟು ಬೇಗ ಅಲ್ಲಿ ಪ್ರಾರಂಭ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ ೪೧೨, ೪೬೨, ೪೭೭, ೪೭೮ } ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

ಅಧ್ಯಕ್ಷರು.—ಮಲ್ಲಾರಿಗೌಡರ ಪರವಾಗಿ, ಮಾನ್ಯ ಕೃಷ್ಣನ್‌ರವರೇ ಪ್ರಶ್ನೆಯನ್ನು ಕೇಳಿ.